**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಸಿ.ಸಿ. ನಂಃ 496/2025**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಯಾದಗಿರಿ, ಈ ಕೆಳಗಿನ ಆರೋಪಿ.**

**ಫಿರ್ಯಾಧಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ ಠಾಣೆ**

**// ವಿರುದ್ದ //**

**ಆರೋಪಿತರು : ಮಲ್ಲಯ್ಯ**

| | |
|---|---|
| **ಆರೋಪಿತರುಃ 1.** | ಮಲ್ಲಯ್ಯ ತಂದೆ ತಿಪ್ಪಯ್ಯ ತಿಪ್ಪಯ್ಯನೋರ,<br>ಸಾಃ ನಾಗ್ಲಾಪೂರ ಗ್ರಾಮ,<br>ತಾಃ ಮತ್ತು ಜಿಃ ಯಾದಗಿರಿ. |

**ಆಪಾದನೆಯ ಸಾರಾಂಶ**

ದಿನಾಂಕಃ 05-12-2024 ರಂದು ಬೆಃ 09-00 ಗಂಟೆಗೆ ಸೈದಾಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಬೀದರ ಗುತ್ತಿ ರಾಷ್ಟೀಯ ಹೆದ್ದಾರಿ ಸಂಖ್ಯೆ-150 ರಾಂಪೂರ (ಕೆ) ಕ್ರಾಸ ಹತ್ತಿರ ಆರೋಪಿಯಾದ ನೀನು ನಿನ್ನ ಆಟೋ ನಂ. ಕೆಎ-33-ಎ-5426 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ರಾಂಪೂರ (ಕೆ) ರಸ್ತೆಯ ಹತ್ತಿರ ಅಪಘಾತ ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ನಿನ್ನ ಆಟೋವನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ರಾಂಪೂರ (ಕೆ) ರಸ್ತೆಯ ಹತ್ತಿರ ಅಪಘಾತ ಮಾಡಿದ್ದರಿಂದ ಆಟೋ ಚಾಲಕ ಮತ್ತು ಚಾಸಾಃ7, 19 ರವರಿಗೆ ಸಾದ ಸ್ವರೂಪದ ಗಾಯಗಳು ಮತ್ತು ಹಣಮಂತ ಇವರಿಗೆ ಗಂಭೀರವಾಗಿ ಗಾಯಗೊಂಡಿದ್ದು, ಈ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ 125(ಎ), 125(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ನಿನ್ನ ಆಟೋವನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ರಾಂಪೂರ (ಕೆ) ರಸ್ತೆಯ ಹತ್ತಿರ ಅಪಘಾತ ಮಾಡಿದ್ದರಿಂದ ಹಣಮಂತಿ ಇವರಿಗೆ ಹೆಚ್ಚಿನ ಉಪಚಾರ ಕುರಿತು ರಾಯಚೂರು ರಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಧ್ಯ ಮಾರ್ಗದಲ್ಲಿ ಅದೇದಿನ ಮದ್ಯಾಹ್ನ 12-55 ಗಂಟೆ ಸುಮಾರಿಗೆ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 106(1) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ಆಟೋವನ್ನು ಪರ್ಮಿಟ್ ಮೀರಿ ಚಲಾಯಿಸಿದ್ದು, ಈ ಮೂಲಕ ಐ.ಎಂ.ವಿ ಆಕ್ಟ್ 192(ಎ), 194(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

5. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿತನಾದ ನೀನು ನಿನ್ನ ಆಟೋ ವಾಹನ ನೊಂದಣಿ ಸಂಖ್ಯೆಃ ಕೆಎ-33-ಎ-5426 ವಾಹನದಲ್ಲಿ ಅರ್ಹತೆಗಿಂತ ಹೆಚ್ಚಿನ ಜನರನ್ನು ಕೂಡಿಸಿಕೊಂಡು ಸಾಗಿಸಿದ್ದು, ಈ ಮೂಲಕ ಐ.ಎಂ.ವಿ ಆಕ್ಟ್ 177 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ಆಪಾದನೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

**ದಿನಾಂಕ 28-11-2025**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**